# ತಾವರೆ ಮತ್ತು ನೈದಿಲೆ





ಸುಧಾ ನವೆಂಬರ್ 4 ಸಂಚಿಕೆಯ 8ನೆಯ ಪುಟದಲ್ಲಿ ಪ್ರಕಟವಾಗಿರುವ 'ಥರ ಥರ ತಾವರೆ' ಎಂಬ ಲೇಖನದ ಬಗ್ಗೆ ನನ್ನ ಅನಿಸಿಕೆಗಳು.

1. ಲೇಖನದಲ್ಲಿ ತಾವರೆಗೂ ನೈದಿಲೆಗೂ ವ್ಯತ್ಯಾಸವನ್ನು ಗುರುತಿಸಿಲ್ಲ. ಇದರಲ್ಲಿ 3 ಚಿತ್ರಗಳಿದ್ದು, ಕೆಳಗಿನ 2 ತಾವರೆಯನ್ನೂ ಮೇಲಿರುವುದರಲ್ಲಿ ನೈದಿಲೆಯನ್ನೂ ಕಾಣಬಹುದು.

2. ಪ್ರಕೃತವಾಗಿ ತಾವರೆಯ ಹೆಸರು ನೆಲುಂಬೋ ನ್ಯೂಸಿಫೆರ ಮತ್ತು ಇದು ನೆಲುಂಬೂನೇಸಿ ಕುಟುಂಬಕ್ಕೆ ಸೇರಿದ ಹಾಗೂ ಸೂಚಿಸಿದಂತೆ ನಿಂಫಿಯೇಸಿಗಲ್ಲ.

3. ತಾವರೆ (ಕಮಲ) ಹಾಗೂ ನೈದಿಲೆಯನ್ನು ಒಂದೇ ಸಸ್ಯವೆಂದು ತಪ್ಪು ತಿಳಿಯುವುದು ಸಾಮಾನ್ಯ. ಇವೆರಡರ ವ್ಯತ್ಯಾಸಗಳು ಹಲವಾರು.

4. ತಾವರೆಯ ಹೂವಿನ ಮಧ್ಯಭಾಗದಲ್ಲಿರುವ ಬೀಜಕೋಶದ ರಚನೆ ವಿಭಿನ್ನ.

ತಾವರೆಯ ಎಲೆಗಳು ಪರಿಪೂರ್ಣ ವೃತ್ತಾಕಾರದಲ್ಲಿದ್ದು, ಇದರ ಬಾಗಿದ ಮೇಲ್ಮೈ ನುಣುಪಾಗಿಯೂ ಹೊಳಪಾಗಿಯೂ ಇರುತ್ತದೆ.

5. ತಾವರೆ ಹೂವು ಭಾರತದ ಹಾಗೂ ವಿಯೆಟ್ನಾಮ್ ದೇಶಗಳ ರಾಷ್ಟ್ರ ಪುಷ್ಪ.

★ ಕೆ.ಆರ್. ಕುಮಾರ್

# 2011 ಸುಧಾ ಯುಗಾದಿ ವಿಶೇಷಾಂಕ




***ಮತ್ತೆ ಯುಗಾದಿ ಬರುತ್ತಿದೆ. ಹಾಗೆಯೇ ನಿಮ್ಮೆಲ್ಲರ ಪ್ರೀತಿಯ ಸುಧಾ ಯುಗಾದಿ ವಿಶೇಷಾಂಕ ಕೂಡಾ!***

ಈ ಸಲ ಓದುಗರ ಪಾಲ್ಗೊಳ್ಳುವಿಕೆಗೆ ಎರಡು ಹೊಸ ವಿಷಯಗಳಿವೆ.

**1. ಎಸ್‌ಎಂಎಸ್ ಕಿರಿಕಿರಿ**

ಇವತ್ತು ಮೊಬೈಲ್ ಇಲ್ಲದ ಜನರಿಲ್ಲ; ಹಾಗೆಯೇ ಪ್ರತಿದಿನ ಎಸ್‌ಎಂಎಸ್ ಕಳುಹಿಸದ, ಸ್ವೀಕರಿಸದವರೂ ಇಲ್ಲ. ಆದರೆ ಈ ಎಸ್‌ಎಂಎಸ್ ಎನ್ನುವುದು ಎಷ್ಟೋ ಸಲ ಕಿರಿಕಿರಿಯ ಪರಮಾವಧಿ ಆಗಿರುತ್ತದೆ. ನಿಮ್ಮಲ್ಲಿ ನಗೆ ಉಕ್ಕಿಸಿದ, ಅಸಹನೆ ಏರಿಸಿದ, ಪಜೀತಿಗೊಳಪಡಿಸಿದ ಅಂತಹ ಎಸ್‌ಎಂಎಸ್ ಅನುಭವಗಳಿವೆಯೆ? ಹಾಗಿದ್ದರೆ ಅಂತಹದ್ದೊಂದು ಅನುಭವದ ಬಗ್ಗೆ ನಮಗೆ 150 ಶಬ್ದಗಳ ಮಿತಿಯೊಳಗೆ ಬರೆದು ಕಳಿಸಿ.

**2. ಕೈಗೆ ಬಂದದ್ದು ಬಾಯಿಗೆ ಬರಲಿಲ್ಲ**

ಎಲ್ಲವೂ ನೀವು ಅಂದುಕೊಂಡಂತೆಯೇ ನಡೆಯುತ್ತಿತ್ತು. ಆದರೆ ಕೊನೆಯ ಕ್ಷಣದಲ್ಲಿ ಅದು ಕೈತಪ್ಪಿ ಹೋಯಿತು! ಹೀಗೆ ಜೀವನದಲ್ಲಿ ಎಷ್ಟೋ ಸಲ ಆದದ್ದಿದೆ. ಆದರೆ ಹಾಗೆ ಆದ ಒಂದು ಘಟನೆಯನ್ನು ಮಾತ್ರ ನಿಮಗೆ ಮರೆಯಲಾಗುತ್ತಿಲ್ಲ. ಅಂತಹ ಘಟನೆಯನ್ನು, ವಿಷಯವನ್ನು 200 ಶಬ್ದಗಳ ಮಿತಿಯಲ್ಲಿ ವಿವರಿಸಿ ನಮಗೆ ಬರೆಯಿರಿ:

ನಿಮ್ಮ ಬರಹ ನಮಗೆ ಡಿಸೆಂಬರ್ 30ರೊಳಗೆ ತಲುಪಬೇಕು.

ಆಯ್ಕೆಯಾದ ಬರಹಗಳು ಸುಧಾ ಯುಗಾದಿ ವಿಶೇಷಾಂಕ-2011 ರಲ್ಲಿ ಪ್ರಕಟವಾಗುತ್ತವೆ. ಸೂಕ್ತ ಸಂಭಾವನೆಯೂ ಇದೆ.

ಬರಹ ತಲುಪಬೇಕಾದ ವಿಳಾಸ:
ಓದುಗರ ವೇದಿಕೆ
ಸುಧಾ- ಯುಗಾದಿ ವಿಶೇಷಾಂಕ 2011
75, ಮಹಾತ್ಮಾ ಗಾಂಧಿ ರಸ್ತೆ
ಬೆಂಗಳೂರು-1